ಸಾವೆಂದರೆ ಕತ್ತಲು ಮಾತ್ರ ಅಂತ ಗೊತ್ತಿತ್ತು. ಬದುಕಿನ ಕಡೆಯ ತಿರುವದು. ನಡೆವ ಹಾದಿಗೆ ಜಡಿದ ಶಾಶ್ವತ ಬಾಗಿಲೆಂದೇ ನನ್ನ ಯಾವತ್ತಿನ ನಂಬಿಕೆಯಾಗಿತ್ತು. ಆ ಬಾಗಿಲನ್ನು ಒಮ್ಮೆ ರಾಚಿ ಹಾಕಿಬಿಟ್ಟರೆ ಗಾಳಿ, ಬೆಳಕು, ಏನೂ ಇಲ್ಲವೆಂದೇ ಅಂದುಕೊಂಡಿದ್ದೆ. ಸಾವಿನ ಕತ್ತಲಿಗೆ ಬೆಳಕಿಂಡಿಗಳಿರಬಹುದೆಂದು ಗೊತ್ತಿರಲಿಲ್ಲ. ಗೊತ್ತಿರಲೇ ಇಲ್ಲ. ಪುಟ್ಟ ಪುಟ್ಟ ತೂತುಗಳಿಂದ ಇಷ್ಟಿಷ್ಟೇ ತೂರಿಬರುವ ಬೆಳಕು ಅಸ್ಪಷ್ಟವಾಗಿ ತೋರಿಸುವ ಸತ್ಯದ ಕಳೇಬರವನ್ನು ಹೇಗೆ ಅರ್ಥೈಸಿಕೊಳ್ಳಬೇಕೆಂದು ಗೊತ್ತಾಗಲಿಲ್ಲ.

ಕಿಟಕಿಯಿಂದ ತೂರಿಬರುತ್ತಿದ್ದ ಮಂದ ಬೆಳಕಿನಲ್ಲಿ ಅಸ್ಪಷ್ಟವಾಗಿ ತೋರುತ್ತಾ ತಿರುಗುತ್ತಿದ್ದ ಫ್ಯಾನಿನ ಗುಂಬವನ್ನೇ ತದೇಕವಾಗಿ ನಿಟ್ಟಿಸುತ್ತಾ ಮಲಗಿದ್ದೆ. ಎಷ್ಟೇ ಹೊತ್ತಾದರೂ ನಿದ್ದೆ ಸುಳಿಯಲಿಲ್ಲ. ತೆರೆದಿದ್ದ ಎವೆಗಳ ಅಂಚು ಆಗಾಗ ತುಂಬಿಕೊಳ್ಳುತ್ತಾ ಕಪಾಲದಲ್ಲಿ ಇಳಿದು ಕತ್ತನ್ನು ಒದ್ದೆ ಮಾಡುತ್ತಿತ್ತು. ಕೆಲ ಹನಿಗಳು ದಿಂಬಿನೊಳಗೆ ಇಳಿಯುತ್ತಿದ್ದವು. ಮನೆಯಲ್ಲಿ ಎಲ್ಲರೂ ಮಲಗಿದ್ದರು. ಆಗಲೇ ವಿಧವಿಧ ಗೊರಕೆಯ ಸದ್ದುಗಳು ಮನೆಯ ಸೂರಿಗೆ ಬಡಿದು ಮರಳುತ್ತಿದ್ದವು. ವಿಚಿತ್ರ ಸಂಕಟದಿಂದ ಹೊಟ್ಟೆಯೊಳಗೆ ಕಲಸಿದಂತಾಗಿ ವಾಕರಿಕೆ ಬಂತು. ಸರಕ್ಕನೆ ಎದ್ದು ಅಲ್ಲೇಇದ್ದ ಕಾಮನ್ ಟಾಯ್ಲೆಟ್ಟಿಗೆ ಹೋಗಿ ಕಾರಿಕೊಂಡೆ. ರೂಮಿನ ಬಾಗಿಲು ತೆಗೆದು ವಸು ಹೊರಬಂದಳು. 'ಯಾಕೋ ರಾಘು ನಿದ್ದೆ ಬರಲಿಲ್ವಾ? ವಾಂತಿ ಯಾಕಾಯ್ತೋ? ಹುಷಾರಿಲ್ವೇನೊ?' ಎಂದು ಕಕ್ಕುಲತೆಯಿಂದ ಕೇಳಿದಳು. ಎದೆಯೊಳಗೆ ಹೆಪ್ಪುಗಟ್ಟಿದ್ದೆಲ್ಲ ಹೊರ ಬರುವಂತೆ ಬಿಕ್ಕಿಬಿಕ್ಕಿ ಅತ್ತುಬಿಟ್ಟೆ. ಅವಳಿಗೂ ಅಳು ಉಕ್ಕಿ ಬಂದು, 'ಹಿಂಗ್ ಮಾಡ್ಕೊಂಡ್ರೆ ಹೆಂಗೋ? ಅವಳೇನು ವಾಪಸ್ ಬರ್ತಾಳ ನೀನು ಅತ್ರೆ... ಅವಳು ಬರೋ ಹಂಗಿದ್ರೆ ನಾನು ನಿಂಜೊತೆಗೆ ಅಳ್ತಿದ್ದೆ ಕಣೊ. ಆಗಿದ್ದು ಆಗೋಯ್ತು ಅವಳಂತು ಬರಲ್ಲ. ಇರೋದೊಂದು ಮಗು. ಅದನ್ನು ತಬ್ಬಲಿ ಅನ್ನಿಸದ ಹಾಗೆ ನೋಡ್ಕೊಳೋ... ಅದೊಂದೆ ನೀನು ಅವಳಿಗೆ ಮಾಡಬೇಕಾದ ಕರ್ತವ್ಯ. ನೀನು ಹೀಗೆ ಕಂಗೆಟ್ರೆ ಆ ಮಗು ಏನಾಗಬೇಡ? ನಿನ್ನ ದಮ್ಮಯ್ಯ ರಾಘಣ್ಣ... ಧೈರ್ಯ ತಂದುಕೋಪ್ಪ' ಇಷ್ಟು ಹೇಳುವಷ್ಟರಲ್ಲಿ ಅವಳಿಗೂ ಅಳು ಬಂತು. ನಮ್ಮಿಬ್ಬರ ಅಳು, ಮಾತಿನ ಶಬ್ದಕ್ಕೆ ಭಾವ ಕೋಣೆಯಿಂದ ಹೊರಬಂದರು. 'ಇದೇನೋ ರಾಘು ಈ ಪರಿ... ನೀನೊಬ್ಬಳು... ಅವ್ನಿಗೆ ಸಮಾಧಾನ ಹೇಳದು ಬಿಟ್ಟು ನೀನೂ ಅತ್ತು ಅವನ್ನೂ ಅಳಿಸ್ತೀಯಲ್ಲೆ... ವಾಟ್ ವಾಸ್ ರಾಂಗ್ ವಿತ್ ಯೂ ಆಲ್? ಜೀವನ ಹೆಂಗೆ ಬಂದ್ರೆ ಹಂಗೆ ತಗೋಬೇಕು. ಏನು ಮಾಡಕ್ಕಾಗುತ್ತೆ? ಇಟ್ ವಾಸ್ ಎನ್ ಆ್ಯಕ್ಸಿಡೆಂಟ್... ಒಬ್ರು ಮುಂದೆ ಒಬ್ರು ಹಿಂದೆ. ನಾವೇನು ಇಲ್ಲೇ ಶಾಶ್ವತವಾಗಿ ಗೂಟ ಬಡಕೊಂಡು ಕೂತಿರ್ತೀವ?' ಇನ್ನೂ ಮಾತಾಡುತ್ತಿದ್ದವರು ಧ್ವನಿ ತಗ್ಗಿಸಿ 'ಹುಶ್... ಇಟ್ ಈಸ್ ತ್ರೀ ಓ ಕ್ಲಾಕ್. ಇನ್ನೊಂದು ತ್ರೀ ಅವರ್ಸ್‌ಗೆ ಎಲ್ರೂ ಏಳ್ತಾರೆ. ನೀವೂ ಮಲಕ್ಕೊಳಿ. ಎಲ್ಲಾರ್ಗು ಡಿಸ್ಟರ್ಬ್ ಆಗುತ್ತೆ. ಬೆಳಿಗ್ಗೆ ಎಂಟು ಗಂಟೆಗೆಲ್ಲ ನಾವಲ್ಲಿರಬೇಕು. ನಾಳೆ ಧರ್ಮೋದಕ' ಅಂತ ಒಳಹೋದರು. ನಾನು, 'ವಸು ನೀನು ಹೋಗಿ ಮಲಕ್ಕೊಮ್ಮ. ನನ್ನ ಕರ್ಮಕ್ಕೆ ಯಾರೇನು ಮಾಡಕ್ಕಾಗುತ್ತೆ' ಎಂದೆ ಗದ್ಗದನಾಗಿ. ಅವಳು ನನ್ನ ಕೈ ಹಿಡಿದು ಅದುಮಿ 'ಮಲ್ಕೊಳೊ' ಅನ್ನುತ್ತಾ ಕೋಣೆಯೊಳಹೋದಳು.

ರಾಘು–ರಮ್ಯನಂಥ ಜೋಡಿನ ನಾನೀವರ್ಗು ಎಲ್ಲೂ ನೋಡಲಿಲ್ಲ ಅನ್ನುತ್ತಿದ್ದ ವಸುವಿನಿಂದ ಅವಳನ್ನು ಮರೆತುಬಿಡು ಅನ್ನುವ ಮಾತು ಎಂಥ ವಿಪರ್ಯಾಸವೆನ್ನಿಸಿತು ನನಗೆ. ರಮ್ಯ ಎನ್ನುವ